# ಹತ್ತಿಯ ಶತ್ರು 'ಕೆಂಪು ಹತ್ತಿ ತಿಗಣೆ'



**ಬಹಳಷ್ಟು ಬೆಳೆಗಳಿಗೆ, ಅದರಲ್ಲೂ ಹತ್ತಿಗೆ ಬಲು ಮಾರಕವಾಗಿರುವ ಈ ಕೆಂಪು ಹತ್ತಿ ತಿಗಣೆಗಳು ರೈತನಿಗೆ ಉಪದ್ರವಿ ಕೀಟಗಳು.**

**■ ಶಶಿಧರಸ್ವಾಮಿ ಆರ್. ಹಿರೇಮಠ**

'ಹತ್ತಿಗೆ ಹತ್ತು ಕುತ್ತು' ಎಂಬ ಮಾತಿದೆ. ಕೀಟಬಾಧೆಯಿಂದ ಇಳುವರಿ ಕಡಿಮೆಯಾಗಿ ಹತ್ತಿ ಬೆಳೆದ ರೈತನ ಬಾಳು ಕಂಗಾಲಾಗುತ್ತದೆ. ಹೀಗೆ ಹತ್ತಿಯ ಜೀವ ಹಿಂಡುವ ಕೀಟಗಳಲ್ಲಿ ಈ 'ಕೆಂಪು ಹತ್ತಿ ತಿಗಣೆ'ಯೂ ಒಂದು.

ಹತ್ತಿ ಬೆಳೆಯನ್ನಷ್ಟೇ ಅಲ್ಲ – ಬೆಂಡೆಕಾಯಿ, ಪುಂಡಿಸೊಪ್ಪು, ಕಸ್ತೂರಿಬೆಂಡೆ, ನಿಂಬೆ, ಮೆಕ್ಕೆಜೋಳ, ಸೆಣಬು, ಕೆಂಪುಬೂರಗ, ಬಿಳಿಬೂರಗ, ತೇಗ (ಸಾಗವಾನಿ), ಹೂವರಸಿ ಮರ, ದಾಸವಾಳ, ಕಡ್ಲಿದಾಸವಾಳಗಳಿಗೆ ಹಾನಿ ಮಾಡುವ ಉಪದ್ರವಿ ಕೀಟವೂ ಹೌದು. ಹತ್ತಿ ಬೆಳೆಯ ಚಿಗುರುಗಳನ್ನು ತಿಂದು ವಯಸ್ಕ ಮತ್ತು ಮರಿಹುಳುಗಳು ಗಂಭೀರ ಪೀಡಾಕೀಟಗಳಾಗುತ್ತವೆ. ಹತ್ತಿ ಬೀಜಗಳು ಮಾಗುವಾಗ ಶಿಲೀಂಧ್ರಗಳನ್ನು ಹರಡುವಂತೆ ಮಾಡುತ್ತವೆ.

'ಕೆಂಪು ಹತ್ತಿ ತಿಗಣೆ'ಗಳನ್ನು ಇಂಗ್ಲಿಷ್‌ನಲ್ಲಿ 'ಇಂಡಿಯನ್ ಕಾಟನ್ ಸ್ಟೇನರ್', 'ರೆಡ್ ಕಾಟನ್ ಸ್ಟೇನರ್' ಅಥವಾ 'ರೆಡ್ ಕಾಟನ್ ಬಗ್' ಎಂದು ಕರೆಯುತ್ತಾರೆ. ವೈಜ್ಞಾನಿಕವಾಗಿ 'ಡಿಸ್ಡರ್ಕಸ್ ಸಿಂಗ್ಯುಲಾಟಸ್' ಎಂದು ಹೆಸರಿಸಲಾಗಿದ್ದು, ಅರ್ಧಪಕ್ಷೀಯ (ಅರ್ಧರೆಕ್ಕೆಗಳ) ಹೆಮಿಪ್ಟೆರಾ ಗಣದ, ಪೈರೋಕೊರಿಡೇ ಕುಟುಂಬಕ್ಕೆ ಸೇರಿಸಲಾಗಿದೆ.

ಈ ಕೀಟವು ಸುಮಾರು 12ರಿಂದ 18 ಮಿ.ಮೀ. ಉದ್ದ ಬೆಳೆಯುತ್ತದೆ. ಮುಖ್ಯವಾಗಿ ಕೆಂಪು ಬಣ್ಣದಲ್ಲಿರುತ್ತದೆ. ಕಪ್ಪಾದ ದೇಹದ ಮೇಲೆ ಬಿಳಿ ಪಟ್ಟೆಗಳಿರುತ್ತವೆ. ಮಾಸಲು ಕಿತ್ತಳೆ ಬಣ್ಣದ ರೆಕ್ಕೆಗಳ ಮೇಲೆ ಮೂರು ಕಪ್ಪು ಕಲೆಗಳಿದ್ದು, ತುದಿಯಲ್ಲಿ ಕಪ್ಪಾಗಿರುವ ಮಚ್ಚೆಯಿರುತ್ತದೆ. ಈ ಕೀಟವು ತನ್ನ ಆತಿಥೇಯ ಸಸ್ಯಗಳ ಕಾಂಡಗಳಿಂದ ದ್ರವವನ್ನು ಹೀರಿಕೊಳ್ಳುತ್ತದೆ. ಹತ್ತಿ ಸಸ್ಯದ ಮೃದುವಾದ ಬೀಜಗಳಿಂದ ದ್ರವವನ್ನು ಹೀರಿಕೊಳ್ಳುತ್ತದೆ. ಈ ಪ್ರಕ್ರಿಯೆಯಲ್ಲಿ ಸೂಕ್ಷ್ಮಜೀವಿಗಳು, ಶಿಲೀಂಧ್ರಗಳು ಒಳಹೋಗಿ ಬಿಳಿಯಾಗಿರುವ ಹತ್ತಿಯ ಉಣ್ಣೆಯು ಕಪ್ಪಾದ ಬಣ್ಣಕ್ಕೆ ತಿರುಗಬಹುದು. ಏತನ್ಮಧ್ಯೆ ಬೀಜಗಳು ಒಣಗುತ್ತವೆ. ನಾರುಗಳು ವಿಸ್ತರಿಸಲು ವಿಫಲವಾಗಬಹುದು ಮತ್ತು ಕಾಯಿಗಳು ಒಡೆಯದೇ ಸ್ಥಗಿತಗೊಂಡು ಇರಕ್ಲತ್ತಿಯಾಗಬಹುದು. ಆತಿಥೇಯ ಸಸ್ಯದ ಬೀಜಗಳು ಬಲಿತು ಒಣಗಿದಾಗ ಈ ತಿಗಣೆಗಳು ಅದೇ ಸಸ್ಯದ ಇನ್ನೊಂದು ಹಣ್ಣು ಅಥವಾ ವಿಭಿನ್ನ ಜಾತಿಯ ಹೊಸ ಸಸ್ಯಗಳಿಗೆ ವಲಸೆ ಹೋಗುತ್ತವೆ.

ಆಹಾರವಿಲ್ಲದೆ ಹಲವಾರು ದಿನಗಳವರೆಗೆ ಈ ಕೀಟಗಳು ಬದುಕಬಲ್ಲವು. ಗಂಡು–ಹೆಣ್ಣು ಮಿಲನದ ನಂತರ ಹೆಣ್ಣು ಕೀಟಗಳು ಹಲವಾರು ಗುಂಪುಗಳಲ್ಲಿ ಮೊಟ್ಟೆಗಳನ್ನಿಡುತ್ತವೆ. ಪ್ರತಿಯೊಂದು ಗುಂಪಿನಲ್ಲಿ 60ರಿಂದ 90 ಮೊಟ್ಟೆಗಳಿರುತ್ತವೆ. ಮೊಟ್ಟೆಗಳು ಐದು ದಿನಗಳ ನಂತರ ಹೊರಬರುತ್ತವೆ ಮತ್ತು ಮರಿಹುಳುಗಳು ಪ್ರಬುದ್ಧವಾಗುವ ಮೊದಲು 30–40 ಅಥವಾ ಅದಕ್ಕಿಂತ ಹೆಚ್ಚಿನ ದಿನಗಳ ಅವಧಿಯಲ್ಲಿ ನಾಲ್ಕು ಪೊರೆ ಕಳಚುವ ಹಂತಗಳ ಮೂಲಕ ಬೆಳವಣಿಗೆ ಹೊಂದಿ ಪ್ರೌಢ ತಿಗಣೆಯಾಗಿ ಹೊರಹೊಮ್ಮುತ್ತವೆ.



## ಕೆಂಪು ಹತ್ತಿ ತಿಗಣೆಗಳ ನಿಯಂತ್ರಣ

ಸೋಂಕಿತ ಮತ್ತು ಈ ತಿಗಣೆಗಳಿರುವ ಇಡೀ ಗಿಡವನ್ನು ಕಿತ್ತು ಹೊಲದ ಬದುವಿಗೆ ತಂದು ಸಂಪೂರ್ಣ ಸುಡಬೇಕು. 500 ಗ್ರಾಂ ತಾಜಾ ಸೀತಾಫಲ (ಸೀತಾಪ್ಪಾರಲ) ಎಲೆಗಳ ಸಾರವನ್ನು ಬಳಸಿ, 15ರಿಂದ 17 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಕುದಿಸಬೇಕು. ದ್ರವವು ಸುಮಾರು 2–3 ಲೀಟರ್‌ಗೆ ಇಳಿಯುವರೆಗೂ ಕುದಿಸಿ ಶೇಖರಿಸಿ ಈ ಸಾವಯವಯುಕ್ತ ಸಾರವನ್ನು 10–15 ಲೀಟರ್ ನೀರಿಗೆ ಸೇರಿಸಿ ಸ್ಪ್ರೇಯರ್ ಮೂಲಕ ಸೋಂಕಿತ ಸಸ್ಯಗಳ ಮೇಲೆ ಸಿಂಪಡಿಸುವುದರಿಂದ ಈ ತಿಗಣೆಗಳನ್ನು ನಾಶಮಾಡಬಹುದು. ಇದರಿಂದ ಇತರ ಪರೋಪಕಾರಿ ಕೀಟಗಳಿಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಮತ್ತು ಸೀತಾಫಲ ಎಲೆಗಳ ಸಾರದ ಸಾವಯವ ಕೀಟನಾಶಕ ಬಳಸುವುದರಿಂದ ಪ್ರಕೃತಿ, ಮಾನವರ ಆರೋಗ್ಯದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ.

ಪ್ರತಿಕ್ರಿಯಿಸಿ: feedback@sudha.co.in